ರಾತಿ ಪಡೆದಿದ್ದು ಟೆಂಡರಿಗೆ ಬಂದಿದ್ದು ಇನ್ನೂ ಆ ಕೆಲಸವನ್ನು ಕೈಗೆತ್ತಿಕೊಳ್ಳದಿರುವುದು ಆ ಕ್ಷೇತ್ರದ ಜನರಿಗೆ ಆನಾನುಕೂಲದೊಂದಿಗೆ ಆತಂಕವನ್ನುಂಟು ಮಾಡಿದೆ. ಇನ್ನಾದರೂ ಸರಕಾರ ಗಮನಹರಿಸಿ ಕ್ಯೂಕೂರು ಸೇತುವೆಯ ಕೆಲಸವನ್ನು ಪ್ರಾರಂಭಿಸಬೇಕೆಂದು ಸದನದ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಸಚಿವರು) ಸ್ವಾಮಿ. ೮೨ರಲ್ಲಿ ಇದು ನಿಗದಿಯಾಗಿತ್ತು. ಎಸ್ಟಿಮೇಟ್ ಕಾಸ್ಟ್ ೧೨೦ ಪರ್ಸೆಂಟ್ ಜಾಸ್ತಿಯಾಗಿದೆ. ಇದಕ್ಕೆ ಸರ್ಕಾರ ಮರು ಮಂಜೂರಾತಿ ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(IV) ಕಾಫಿ ಬೀಜದ ಮೇಲಿನ ರಫ್ತು ತೆರಿಗೆಯನ್ನು ರದ್ದು ಪಡಿಸುವ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್— ಮಾನ್ಯ ಅಧ್ಯಕ್ಷರೇ ಕಾಫಿ ಬೀಜದ ಮೇಲಿನ ರಫ್ತು ತೆರಿಗೆಯನ್ನು ರದ್ದು ಪಡಿಸುವ ಬದಲು ಏರಿಕೆ ಮಾಡಿರುವ ಸರಕಾರದ ನೀತಿಯ ವಿರುದ್ಧ ಪ್ರತಿಭಟಿಸಲು ಹಾಗೂ ರಫ್ತು ತೆರಿಗೆ ವಿನಾಯಿತಿಗೆ ಸರಕಾರವನ್ನು ಒತ್ತಾಯಪಡಿಸಲು ರಾಜ್ಯದಲ್ಲಿನ ಸುಮಾರು ೫ ಸಾವಿರಕ್ಕೂ ಹೆಚ್ಚು ಕಾಫಿ ಬೆಳೆಗಾರರು ಮಾರ್ಚ್ ೨೪ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಅತಿಯಾಗಿ ತೊಂದರೆಯಾಗುವ ಸಂಭವವಿದ್ದು ಸರಕಾರದವರು ಈ ಬಗ್ಗೆ ಅವಶ್ಯಕ ಕ್ರಮವನ್ನು ಕೂಡಲೇ ಕೈಕೊಂಡು ಸಾರ್ವಜನಿಕರಿಗಾಗುವ ತೊಂದರೆಯನ್ನು ತಪ್ಪಿಸಬೇಕೆಂದು ಸರಕಾರದವರಲ್ಲಿ ಒತ್ತಾಯಪಡಿಸುತ್ತೇನೆ.

ಶ್ರೀ ಬಿ. ಎ ಜೀವಿಜಯ (ಮಾನ್ಯ ಅರಣ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ. ರಫ್ತು ತೆರಿಗೆಯನ್ನು ಹಾಕುವುದು ಕೇಂದ್ರ ಸರ್ಕಾರ. ರಾಜ್ಯ ಸರ್ಕಾರವಲ್ಲ. ರಾಜ್ಯ ಸರ್ಕಾರ ಕಾಫಿ ಬೆಳಗಾರರಿಗೆ ಸಾಕಷ್ಟು ಸವಲತ್ತುಗಳನ್ನು ಕೊಟ್ಟಿದೆ. ಮಾನ್ಯ ಸದಸ್ಯರಾದ ಮಲ್ಲಾರಿಗೌಡ ಎಸ್. ಪಾಟೀಲರು ಸಹ ಸೇರಿ ಕೇಂದ್ರ ಸರ್ಕಾರದ ಮೇಲೆ ಪ್ರತಿಭಟನೆ ಮಾಡಿದರೆ ಒಳ್ಳೆಯದು.

(V) ಚನ್ನರಾಯಪಟ್ಟಣದ ಭೂ ನ್ಯಾಯ ಮಂಡಲಿಯವರು ಶ್ರೀ ಚಂದ್ರಪ್ಪ ಎಂಬುವವರು ಬದುಕಿದ್ದರೂ ಸಹ ಸತ್ತಿದ್ದಾರೆಂದು ನಮೂದಿಸಿರುವ ಬಗ್ಗೆ

ಶ್ರೀ ವೇದಾಂತ ಹೆಮ್ಮಿಗೆ— ಮಾನ್ಯ ಅಧ್ಯಕ್ಷರೇ. ಚನ್ನರಾಯಪಟ್ಟಣದ ಭೂ ನ್ಯಾಯ ಮಂಡಲಿಯಲ್ಲಿ ಪೂಕದ್ದ ಮೆ ಎಲ್.ಆರ್.ಎಫ್ ೫೦೧:೭೬-೭೭ರಲ್ಲಿ ಚಂದ್ರಪ್ಪ ಎಂಬುವರು ಬದುಕಿದ್ದರೂ ಸತ್ತಿದ್ದಾರೆಂದು ದಾಖಲು ಮಾಡಿದ್ದರೆಂದು ಆದ್ದರಿಂದ ಬದುಕಿದ್ದರೂ ಸತ್ತಿದ್ದಾರೆಂದು ನಮೂದಿಸಿ ಭೂ ನ್ಯಾಯ ಮಂಡಲಿ ಅನ್ಯಾಯ ಮಾಡಿರುವ ಬಗ್ಗೆ ಚಂದ್ರಯ್ಯನವರಿಗೆ ನ್ಯಾಯ ಒದಗಿಸಿ ಕೊಡಬೇಕೆಂದು ಕಳೆದ ಬಾರಿ ಈ ಸದನದಲ್ಲಿ ವಿನಂತಿಸಿಕೊಂಡಿದ್ದೆ ಆದರೆ ಈವರೆವಿಗೆ ಸರ್ಕಾರ ಸತ್ತು ಬದುಕಿರುವ ಚಂದ್ರಯ್ಯನ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಭೂ ನ್ಯಾಯ ಮಂಡಲಿಗಳಲ್ಲಿ ಆಗುತ್ತಿರುವ ಅನ್ಯಾಯಕ್ಕೆ ಇದೊಂದು ಪ್ರತ್ಯಕ್ಷ ನಿದರ್ಶನ ಚಂದ್ರಯ್ಯನವರು ನನ್ನನ್ನು ಬದುಕಿಸಿ ಎಂದು ನನ್ನ ಬೆನ್ನು ಬಿದ್ದಿದ್ದಾರೆ. ಸಂಬಂಧಪಟ್ಟ ಸಚಿವರು ಅವನನ್ನು ಬದುಕಿಸಿ ನ್ಯಾಯ ದೊರಕಿಸಿಕೊಡುವ ಬಗ್ಗೆ ಇದುವರೆವಿಗೆ ಕೈಗೊಂಡಿರುವ ಕ್ರಮಗಳೇನು ಎಂಬುದರ ಬಗ್ಗೆ ಸಂಬಂಧಪಟ್ಟ ಸಚಿವರ ಗಮನವನ್ನು ಸೆಳೆಯಲು ಇಚ್ಛಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)— ಪರಿಶೀಲಿಸಿ ಉತ್ತರ ಹೇಳುತ್ತೇನೆ.

ಅಧ್ಯಕ್ಷರು— ಇದು ಬಹಳ ಗಂಭೀರವಾದ ವಿಚಾರ.